# ಕುರುಡಿಯಾಗಿ ಅರಿಯದ ಲೋಕ ಕಂಡೆ



**ನಾಗನಿಧಿ ಗೌಡ**
**ಕಲರ್ಸ್ ಕನ್ನಡದ ನಟಿ**

◆ **ನೀವು ಹಲವು ಕಲಾ ಪ್ರಕಾರ ಕಲಿತಿದ್ದು ಹೇಗೆ?**

ಮಾರ್ಷಲ್ ಆರ್ಟ್ (ಕಲಾರಿ), ಕತ್ತಿ ವರಸೆ–ದೊಣ್ಣೆ ವರಸೆಯನ್ನು ಕೇರಳದ ವಿನೋದ್ ಅವರ ಹತ್ತಿರ ಕಲಿತಿದ್ದೇನೆ. ಯೋಗಾಭ್ಯಾಸವನ್ನು ಮಾಡುತ್ತೇನೆ. ಯಕ್ಷಗಾನ ಮಾಡುತ್ತೇನೆ, ರಂಗಭೂಮಿಯಲ್ಲಿ ತೊಡಗಿದ್ದೇನೆ. ಲಾಕ್‌ಡೌನ್ ಕಾರಣದಿಂದ ಡಾನ್ಸ್ ಕ್ಲಾಸ್‌ಗೆ ಸೇರಿದ್ದೇನೆ. ಇದೆಲ್ಲವನ್ನು ವೃತ್ತಿಪರವಾಗಿ ತೆಗೆದುಕೊಳ್ಳುವ ಉದ್ದೇಶದಿಂದ ಮಾಡುತ್ತಿಲ್ಲ. ಕಲಾವಿದೆಯಾಗಿ ಎಲ್ಲದೂ ಅಗತ್ಯ ಎಂದು ಭಾವಿಸಿದ್ದೇನೆ. ಯಾವುದೋ ಒಂದು ಸಂದರ್ಭದಲ್ಲಿ ಇದು ಬರಲ್ಲ ಎಂದು ಹೇಳಬಾರದು ಎನ್ನುವ ಕಾರಣಕ್ಕೆ ಕಲೆಯ ವಿವಿಧ ಪ್ರಕಾರಗಳ ಮೂಲತತ್ವವನ್ನು ಕಲಿತಿದ್ದೇನೆ. ಅದರಲ್ಲಿಯೇ ಏನೋ ಸಾಧಿಸಬೇಕು ಎನ್ನುವ ಉದ್ದೇಶ ಸದ್ಯ ನನಗಿಲ್ಲ.

◆ **ಇದರಿಂದ ಒಂದು ಕಡೆ ಫೋಕಸ್ ಮಾಡಲು ಅಡ್ಡಿ ಆಗುತ್ತಾ?**

ಅದುಬೇಕು– ಇದುಬೇಕು ಎಂಬ ಆಕಾಂಕ್ಷೆ ಇರುವುದರಿಂದ ನನ್ನಿಂದ ಆಗಿದ್ದನ್ನು ಕಲಿಯುತ್ತೇನೆ. ಇದೆಲ್ಲ ನನ್ನ ಗುರಿಮುಟ್ಟುವ ಪಯಣದ ತೀವ್ರತೆ ಹೆಚ್ಚಿಸುತ್ತದೆ. ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತದೆ. ಅಭಿನಯಕ್ಕೆ ಕಲಿಯುವುದು ತುಂಬ ಇದೆ. ಡಾನ್ಸ್ ನಮ್ಮ ಮಾನಸಿಕ ಒತ್ತಡವನ್ನು ನಿಯಂತ್ರಿಸುವ ಜೊತೆಗೆ ಭಾವಭಿವ್ಯಕ್ತಿಯ ಸೂಕ್ಷ್ಮತೆಯನ್ನು ಬಿಂಬಿಸಲು ನೆರವು ನೀಡುತ್ತದೆ. ಡಾನ್ಸ್ ಫಿಟ್ನೆಸ್ ದೃಷ್ಟಿಯಿಂದ ತುಂಬ ಪ್ರಯೋಜನಕಾರಿ. ಆದ್ದರಿಂದ ನನ್ನ ಫೋಕಸ್ ಸಿನಿಮಾ. ಅದಕ್ಕೆ ಪೂರಕವಾಗಿಯೇ ಈ ಎಲ್ಲ ಚಟುವಟಿಕೆ. ನಟನೆಯ ಜೊತೆಗೆ ನಾಟಕ ನಿರ್ದೇಶನವನ್ನು ಇತ್ತೀಚೆಗೆ ಮಾಡುತ್ತಿದ್ದೇನೆ. ನಿರ್ದೇಶನವನ್ನು ವೃತ್ತಿಪರವಾಗಿ ನೋಡುತ್ತೇನೆ. ಹೊಸದಾಗಿ 'ಜಟಾಯು ಮೋಕ್ಷ' ಎಂಬ ಯಕ್ಷಗಾನ ಪ್ರಸಂಗವನ್ನು ಮಾಡಿದ್ದೆ. ನನ್ನ ತಂದೆ ಕೂಡ ಯಕ್ಷಗಾನ ಕಲಾವಿದರಾಗಿದ್ದರು. ನಮ್ಮದೇ ಒಂದು ಕೇಂದ್ರ ಇದೆ. ಸೋದರ ಮಾವ, ಚಿಕ್ಕಪ್ಪ, ದೊಡ್ಡಪ್ಪ ಯಕ್ಷಗಾನ ಕಲಾವಿದರು. ನಾನು ಅಕ್ಕ ಇಬ್ಬರೂ ಮಾಡುತ್ತೇವೆ. ಸಿನಿಮಾ ನನ್ನ ಫೋಕಸ್.

'ಹಳೆಯ ವಿನಾಶಗಳು' ಸಿನಿಮಾದಲ್ಲಿ ನಾಯಕಿ ಆಗಿ ನಟಿಸಿದ್ದೇನೆ. ಡಬ್ಬಿಂಗ್ ಕೂಡ ಮುಗಿದಿದೆ. ಇನ್ನೇನು ತೆರೆ ಕಾಣಬೇಕಿದೆ. ಬಿಡುವಿನ ಸಮಯದಲ್ಲಿ ಸೀರಿಯಲ್ ಮಾಡಿಕೊಂಡು ಸಿನಿಮಾವನ್ನೇ ಮುಂದುವರಿಸಬೇಕು ಎಂದುಕೊಂಡಿದ್ದೇನೆ. ಏನೂ ಇಲ್ಲ ಎಂದರೆ ಯಕ್ಷಗಾನ– ರಂಗಭೂಮಿ ಇದ್ದೇ ಇರುತ್ತದೆ. ಸಾಮಾನ್ಯವಾಗಿ ಸಿನಿಮಾ– ಟೀವಿಯಲ್ಲಿ ಕಾಮಿಡಿ ಮಾಡಿದ್ದರೆ ಕಾಮಿಡಿ ಕಲಾವಿದರು ಎಂದೇ ನೋಡುತ್ತಾರೆ. ಒಬ್ಬ ನಟನ ಸಾಮರ್ಥ್ಯ–ಕೌಶಲ್ಯದ ಮೇಲೆ ಆತ ಎಂತಹ ನಟ ಎಂದು ಗುರುತಿಸಬೇಕು ಎಂದು ಅನಿಸುತ್ತದೆ. ಖಳನಾಯಕಿ ಆಗಿದ್ದರೆ ಮುಂದೆಯೂ ಅಂತಹದ್ದೇ ಪಾತ್ರ ಮಾಡಬೇಕು ಎಂದೇನೂ ಇಲ್ಲ.

◆ **ನಿಮ್ಮ ಪರಿಚಯವನ್ನು ಹೇಳುವುದಾದರೆ...**

ನಾನು ಪಕ್ಕಾ ಕರಾವಳಿಯ ಹುಡುಗಿ. ಹೊನ್ನಾವರ ನಮ್ಮೂರು. ಊಟಕ್ಕೆ ಮೀನು ಬೇಕೆ ಬೇಕು. ಅದಕ್ಕೇ ನನಗೆ ಶೂಟಿಂಗ್ ಮನೆಯಲ್ಲಿ ಮೀನು ಮಂಡೆ ಎಂದು ರೇಗಿಸಿದ್ದೂ ಉಂಟು. ನನ್ನ ತಂದೆಯ ಹರಕೆಯಂತೆ ನಾಗರಾಜ ಆಗಬೇಕಿತ್ತು. ಅದಾಗದಿದ್ದಕ್ಕೆ ನಾಗನಿಧಿ ಆಗಿದ್ದೇನೆ. ಆ ವಿಷಯದಲ್ಲಿ ನನ್ನ ತಂದೆಗೆ ಸ್ವಲ್ಪ ಅಸಮಧಾನ ಇತ್ತು ಎಂದು ಕೇಳಿದ್ದೇನೆ. ಅವರನ್ನು ನೋಡಿದ ನೆನಪೇ ನನಗಿಲ್ಲ. ನಾನು ಮೂರ್ನಾಲ್ಕು ವರ್ಷದವಳು ಇದ್ದಾಗಲೇ ನಮ್ಮನ್ನು ಅಗಲಿದ್ದಾರೆ. ಅಮ್ಮನೇ ಬೆಳೆಸಿದ್ದು, ಅವರೇ ನನ್ನ ಶಕ್ತಿ– ಸ್ಫೂರ್ತಿ. ಇದುವರೆಗೂ ಯಾವುದೇ ನಿರ್ಬಂಧವನ್ನು ಹೇರಿಲ್ಲ. ಬೇರೆ ಬೇರೆ ಕಲಾವಿದರನ್ನು ತೋರಿಸಿ ಹೀಗೆ ಮಾಡು ಎಂಬ ಪ್ರೋತ್ಸಾಹದ ಮಾತುಗಳನ್ನು ಆಡುತ್ತಾರೆ.

◆ **'ಶಾಂತಂಪಾಪಂ'ನಲ್ಲಿ ಮತ್ತೆ ಮತ್ತೆ ಬದಲಾಗುವ ಪಾತ್ರಗಳ ಬಗ್ಗೆ ಹೇಳುವುದಾದರೆ**

ನಾನು ಮಾಡಿದ ಮೊದಲ ಎಪಿಸೋಡಿನಲ್ಲಿ ಕುರುಡಿ ಪಾತ್ರ ನಿರ್ವಹಿಸಿದ್ದೆ. ಅದು ಚಾರ್ಲಿಚಾಪ್ಲಿನ್ ಸಿನಿಮಾ ಆಧಾರಿಸಿದ ಕಥೆಯಾಗಿತ್ತು. ಚಿತ್ರೀಕರಣ ಸಂಪೂರ್ಣ ಕುಂದಾಪುರದ ಸುತ್ತ ಮುತ್ತ ನಡೆದಿತ್ತು. ಅದು ನನಗೆ ಮೊದಲ ಅನುಭವ. ಕುರುಡಿಯಾಗಿ ಅಭಿನಯಿಸುವ ಅವಕಾಶ ಸಿಕ್ಕಿರಲಿಲ್ಲ. ಹಾಗಾಗಿ ತುಂಬ ಖುಷಿಯಿಂದ ಮಾಡಿದೆ. ಹೊಸ ರೀತಿಯ ಪಾತ್ರವನ್ನು ಮಾಡುವುದು ನನಗೆ ತುಂಬ ಇಷ್ಟ. ಪಾತ್ರವನ್ನು ಒಪ್ಪಿದ ನಂತರ ಕಥೆ ಏನು ಅಂತ ಕೇಳಿದೆ. ಕುರುಡಿಯಾಗಿ ನಾನು ಅರಿಯದ ಲೋಕವನ್ನು ಕಂಡು ಬಂದೆ. ಆ ನಂತರ ಎರಡನೇ ಎಪಿಸೋಡ್‌ನಲ್ಲಿ ಮಧ್ಯ ವಯಸ್ಸಿನ ಹೆಂಗಸಿನ ಪಾತ್ರ ಮಾಡಿದೆ. ಅದುಕೂಡ ವಿಭಿನ್ನ ಅನುಭವವನ್ನು ನೀಡಿದೆ. ನಾನು ಹಳ್ಳಿಯ ಹೆಂಗಸು ನನ್ನ ಪತಿ ವಿಕೃತ ಮನೋಸ್ಥಿತಿಯವನು. ನನಗೆ ಚಿತ್ರ ಹಿಂಸೆಯನ್ನು ನೀಡುತ್ತಾನೆ. ಅಂತಹ ಗೋಳಟದ ನಡುವೆ ಮಗುವನ್ನು ಪಾಲನೆ ಮಾಡುತ್ತೇನೆ. ಇಂತಹ ಹಿರಿಯ ಪಾತ್ರವನ್ನು ನಾಟಕದಲ್ಲಿ ನಿರ್ವಹಿಸಿದ್ದೆ. ಟೀವಿಯಲ್ಲಿ ಮಾಡಿರಲಿಲ್ಲ, ಮೂರನೇ ಎಪಿಸೋಡಿಗೂ ಇಂತಹದ್ದೇ ಪಾತ್ರ ಕೊಟ್ಟಿದ್ದಾರೆ. ಭಿನ್ನ ಭಿನ್ನ ಕಥೆಗೆ ಮಧ್ಯ ಮಧ್ಯ ಒಂದೊಂದು ಪಾತ್ರ ಮಾಡುವ ಅವಕಾಶ ಇದೆ. ಒಟ್ಟಾರೆ ಹಿಂಸೆ ಅಹಿಂಸೆಯ ಸಂಘರ್ಷದ ಹೂರಣ 'ಶಾಂತಂಪಾಪಂ' ಎನ್ನಬಹುದು.

■ **ರಾಘವೇಂದ್ರ ಕೆ.**